# ಸ್ತ್ರೀ ಸಂವೇದನೆಯ ಹಿನ್ನೆಲೆಯಲ್ಲಿ 'ಚಪ್ಪಲಿಗಳು ಕಥೆ'

**ಅನುಷ**

ಕಲಾ ವಿಭಾಗ, 3ನೇ ಸೆಮಿಸ್ಟರ್, ವಿಜಯ ಕಾಲೇಜು, ಜಯನಗರ, ಬೆಂಗಳೂರು.

**DOI: https://doi.org/10.5281/zenodo.18788030**

## ABSTRACT:

ಮಹಿಳಾ ಸಬಲೀಕರಣ ಹಾಗೂ ಸ್ತ್ರೀ ಸಂವೇದನೆಯ ನೆಲೆಯಲ್ಲಿ ಡಾ. ಸಾರಾ ಅಬೂಬಕ್ಕರ್ ಅವರ 'ಚಪ್ಪಲಿಗಳು' ಕಥೆಯು ಪಿತೃಪ್ರಧಾನ ವ್ಯವಸ್ಥೆಯ ಕಟು ವಾಸ್ತವವನ್ನು ತೆರೆದಿಡುತ್ತದೆ. ಸಮೀರಾಳ ಪಾತ್ರದ ಮೂಲಕ, ಹೆಣ್ಣನ್ನು ಕೇವಲ ಬಳಸಿ ಬಿಸಾಡುವ 'ಚಪ್ಪಲಿ'ಯಂತೆ ಕಾಣುವ ಪುರುಷ ಅಹಂಕಾರ ಮತ್ತು ಅದರಿಂದಾಗಿ ಆಕೆ ಅನುಭವಿಸುವ ಮಾನಸಿಕ ಖಿನ್ನತೆಯನ್ನು ಇಲ್ಲಿ ಚರ್ಚಿಸಲಾಗಿದೆ. ಇದಕ್ಕೆ ಪೂರಕವಾಗಿ ಡಾ. ವೀಣಾ ಶಾಂತೇಶ್ವರ ಅವರ 'ತಿರುಗಿ ಹೋದವಳು' ಕಥೆಯ ಹಮೀದಾ ಮತ್ತು ಲಕ್ಷ್ಮಿಯರ ದಾಂಪತ್ಯದ ಸಂಘರ್ಷಗಳನ್ನು ಹಾಗೂ ಸಮಕಾಲೀನ ವಾಸ್ತವ ಘಟನೆಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಲಾಗಿದೆ. ಧರ್ಮ ಮತ್ತು ಸಂಪ್ರದಾಯದ ಹೆಸರಿನಲ್ಲಿ ಹೆಣ್ಣಿನ ಶಿಕ್ಷಣ ಹಾಗೂ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಸಾಮಾಜಿಕ ಧೋರಣೆಯನ್ನು ಪ್ರಶ್ನಿಸುತ್ತಾ, ಸ್ತ್ರೀಯರ ಆತ್ಮಗೌರವ ಮತ್ತು ಸ್ವಾಯತ್ತತೆಯ ಅಗತ್ಯವನ್ನು ಲೇಖನವು ಪ್ರತಿಪಾದಿಸುತ್ತದೆ.

**KEYWORDS:**

ಸ್ತ್ರೀ ಸಂವೇದನೆ, ಪಿತೃಪ್ರಧಾನ ವ್ಯವಸ್ಥೆ, ಮಹಿಳಾ ಶೋಷಣೆ, ಚಪ್ಪಲಿಗಳು, ತುಲನಾತ್ಮಕ ಅಧ್ಯಯನ.

"ಚಪ್ಪಲಿಗಳು" ಇದು ಮಹಿಳಾ ಸಬಲೀಕರಣದ ಕುರಿತಾದ ಒಂದು ಕಥೆಯಾಗಿದೆ. ಸಮಾಜದಲ್ಲಿ ಶೋಷಣೆಗೆ ಒಳಗಾಗಿರುವ ಸ್ತ್ರೀಯರು ಅನುಭವಿಸುತ್ತಿರುವ ಕಷ್ಟ ನೋವುಗಳು, ಬದುಕಿನುದ್ದಕ್ಕೂ ಅವರು ಎದುರಿಸುತ್ತಿರುವ ಸಂಘರ್ಷಗಳ ವಾಸ್ತವಿಕ ಸಂಗತಿಯನ್ನು ಕಥೆಯಲ್ಲಿ ಮನಮುಟ್ಟುವಂತೆ ಚಿತ್ರಿಸಲಾಗಿದೆ. 'ಸಮೀರಾ' ಎಂಬ ಯುವತಿಯ ಪಾತ್ರದ ಮೂಲಕ ಕಥೆಯು ಪ್ರಾರಂಭವಾಗುವುದು, ಇಲ್ಲಿ ಕಥೆಯ ಪ್ರಧಾನ ಪಾತ್ರವು ಈಕೆಯದ್ದೇ ಆಗಿರುತ್ತದೆ.

ಸಮೀರಾ ಸದಾ ಉಲ್ಲಾಸದಿಂದ, ಉತ್ಸಾಹಭರಿತವಾಗಿ ಮನೆಯ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದಳು. ಜೊತೆಗೆ ತನ್ನ ತಮ್ಮ ತಂಗಿಯರನ್ನು ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಳು. ಆದರೆ ಇತ್ತೀಚೆಗೆ ಅವಳು ಯಾವುದರಲ್ಲೂ ಆಸಕ್ತಿ ತೋರಿಸುತ್ತಿರಲಿಲ್ಲ. ಏನೋ ಜಿಗುಪ್ಸೆ, ಬೇಸರದಿಂದ ಯಾರೊಂದಿಗೂ ಮಾತನಾಡದೆ ಮೌನವಾಗಿರುತ್ತಿದ್ದಳು. ಅಳುತ್ತಿದ್ದ ತನ್ನ ಚಿಕ್ಕ ತಂಗಿಯನ್ನು ಕೂಡ ಎತ್ತಿಕೊಳ್ಳುತ್ತಿರಲಿಲ್ಲ. ತಾಯಿ 'ಫಾತಿಮಾ' ಏನೇ ಹೇಳಿದರು ಅದಕ್ಕೆ ವಿರುದ್ಧವಾದ ಪ್ರತಿಕ್ರಿಯೆಯನ್ನೇ ನೀಡುತ್ತಿದ್ದಳು. ಬದುಕಿನ ಬಗ್ಗೆ ವಿವರಿಸಲಾಗದಂತಹ ದ್ವೇಷ, ತಿರಸ್ಕಾರ ಆಕೆಯನ್ನು ಆವರಿಸಿಕೊಂಡಿತು.

ಅಂದೊಂದು ದಿನ ತಾಯಿಯನ್ನು ಹೆಚ್ಚು ಚಿಂತೆಗೀಡು ಮಾಡುವಂತಹ ಘಟನೆ ನಡೆಯಿತು. ತನ್ನ ಆರು ತಿಂಗಳ ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ಆಕೆ ಸಂಜೆ ನಮಾಜು ಮಾಡುತ್ತಿದ್ದಳು. ಮಲಗಿದ್ದ ಕೂಸು ಎಚ್ಚರವಾಗಿ ಅಳತೊಡಗಿತು. ನಮಾಜು ಮುಗಿದ ನಂತರವೇ ಬಂದು ತಕ್ಷಣ ಮಗುವನ್ನು ಎತ್ತಿಕೊಂಡು ಸಮಾಧಾನ ಮಾಡಿದಳು. ಮಗಳು ಸಮೀರಾಳನ್ನು ಕೂಗಿದಳು, ಆದರೆ ಆಕೆಯ ಸುಳಿವೇ ಇರಲಿಲ್ಲ. ಈಗ ಮಗಳನ್ನು ಹುಡುಕುತ್ತಾ ಬಂದು, ಕೊನೆಗೆ ಕಿಟಕಿಯಿಂದಲೇ ಗೇಟಿನ ಬಳಿ ನಿಂತಿದ್ದ ಸಮೀರಾಳನ್ನು ಕಂಡು ತಾಯಿ ನಿಬ್ಬೆರಗಾಗಿ ಹೀಗೆಂದಳು, "ಅಲ್ಲಾ, ಈ ಹುಡುಗಿಗೆ ಏನಾಗಿದೆ? ಹಾಡು ಹಗಲಿನಲ್ಲಿ ಯಾವ ರೀತಿಯ ಘೋಷವೂ ಇಲ್ಲದೆ ಈ ಹುಡುಗಿ ಗೇಟಿನ ಬಳಿಯಲ್ಲಿ ಹೋಗಿ ನಿಂತಿದ್ದಾಳಲ್ಲಾ? ಅಲ್ಲಿ ಬೀದಿಯಲ್ಲಿ ಎಷ್ಟು ಜನ ಗಂಡಸರು ಓಡಾಡುತ್ತಿದ್ದಾರೆ, ಈಕೆಗೆ ಏನೂ ತಲೆ ಕೆಟ್ಟಿದೆಯೇ? ಇವಳ ತಂದೆ ಇದನ್ನು ನೋಡಿದರೆ ಎಲುಬು ಪುಡಿ ಮಾಡದೆ ಬಿಡುವರೆ?" ಎಂದು ಮಗಳನ್ನು ಉದ್ದೇಶಿಸಿ ಯೋಚಿಸುತ್ತ ಅವಳನ್ನು ಒಳಗೆ ಕರೆದಳು.

ಇಲ್ಲಿ ನಾವು ಗಮನಿಸಬೇಕಾದ ವಿಷಯವೆಂದರೆ, ಅಂದಿನ ಕಾಲದಲ್ಲಿ ಮುಸ್ಲಿಂ ಸಮುದಾಯದಲ್ಲಿ ಮಾತ್ರವಲ್ಲ, ಯಾವುದೇ ಧರ್ಮದಲ್ಲಿ ಜನಿಸಿದ ಹೆಣ್ಣು ಮಕ್ಕಳಿಗೆ ಬೆಳಗ್ಗೆಯಿಂದ ಮನೆಯಲ್ಲಿದ್ದು ಬೇಸರವಾದಾಗ ಸಂಜೆ ಹೊತ್ತಿನಲ್ಲಿ ಹೊರಗೆ ಹೋಗುವ ಮಾತಿರಲಿ, ಕೊಂಚ ಸಮಯ ಮನೆಯ ಮುಂದೆ ಅಂಗಳದಲ್ಲಿ ನಿಲ್ಲಲೂ, ಕೂರಲು ಯಾವುದಕ್ಕೂ ಸ್ವಾತಂತ್ರ್ಯವಿರುತ್ತಿರಲಿಲ್ಲ. 'ಎಲುಬು ಪುಡಿ ಮಾಡುತ್ತಾರೆ' ಎಂಬ ಮಾತಿನ ಹಿಂದಿನ ಅರ್ಥ, ಮನೆಯ ಹೆಂಗಸರು ಗಂಡಸರಿಗೆ ಎಷ್ಟು ಹೆದರುತ್ತಿದ್ದರೆಂಬುದನ್ನು ವ್ಯಕ್ತಪಡಿಸಿದೆ. ಸಮೀರಾ ಒಳಗೆ ಬಂದ ನಂತರ ತಾಯಿ ಅವಳನ್ನು ಬಯ್ಯಲು ಶುರುಮಾಡಿದಳು. ಇದನ್ನು ಕೇಳಿದ ಸಮೀರಾ ತಾತ್ಸಾರದಿಂದ ಉರಿಯುವ ದ್ವೇಷದ ಮಾತುಗಳಿಂದ ತಾಯಿಯನ್ನು ಗದರಿಸಿದಳು. ಮಗಳ ಈ ರೀತಿಯ ನಡವಳಿಕೆ ತಾಯಿಯ ಮನಸ್ಸಿನಲ್ಲಿ ಹತ್ತು ಹಲವು ಪ್ರಶ್ನೆಗಳನ್ನು ಸೃಷ್ಟಿಸಿತು.

ಕೆಲವು ದಿನಗಳ ಹಿಂದೆ ಇದೇ ರೀತಿಯ ಘಟನೆಗಳು ಸಂಭವಿಸಿದಾಗ ಫಾತಿಮಾ ಮಂತ್ರವಾದಿಯೊಬ್ಬನನ್ನು ಮನೆಗೆ ಕರೆಸಿದಳು. ಆತ ಸಮೀರಾಳ ಮೈಯಲ್ಲಿ ಯಾವುದೋ 'ಸೈತಾನ' ಸೇರಿಕೊಂಡಿದೆ ಎಂದು ಕುರಾನ್ ನ ಕೆಲವು ಶ್ಲೋಕಗಳನ್ನು ಪಠಿಸಿ, ಮಂತ್ರ ಹಾಕಿ, ತಾಯಿತ ಮಾಡಿಕೊಟ್ಟು ಹೊರಟನು. ಆದರೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಸಮೀರಾಳ ದೇಹದಲ್ಲಿ ಹೊಕ್ಕಿದ್ದ ಜಿನ್ ಆಕೆಯನ್ನು ಇನ್ನೂ ಬಿಟ್ಟು ಹೋಗಿರಲಿಲ್ಲ. ಅಂದು ರಾತ್ರಿ ಸಮೀರಾಳ ತಂದೆ 'ಹಸನ್ ಬ್ಯಾರಿ' ಮನೆಗೆ ಬಂದಾಗ ಫಾತಿಮಾ ಮಗಳ ಈ ವಿಚಿತ್ರ ವರ್ತನೆಯನ್ನು ಗಂಡನೊಡನೆ ವಿವರಿಸಿದಳು. ಹಾಗೆ ದಿಗಿಲುಗೊಂಡು ಸಮೀರಾಳ ಗಂಡ 'ಶಬೀರ್' ಗೆ ಒಂದು ಪತ್ರ ಬರೆಯಿರಿ ಎಂದು ಸಲಹೆ ನೀಡಿದಳು. ತಂದೆ ತಾಯಿಯರಿಬ್ಬರಿಗೂ ಅಂದಿನಿಂದ ಮಗಳು ಅರ್ಥವಾಗದ ಒಂದು ಒಗಟಾಗಿ ಉಳಿದಳು. ಹಸನ್ ಬ್ಯಾರಿ ಮಗಳನ್ನು ತನ್ನ ತಂಗಿ ಮಗನಿಗೆ ಕೊಟ್ಟಿದ್ದ. ಸಮೀರಾ ವಿವಾಹಕ್ಕೂ ಮುನ್ನ ಮತ್ತು ವಿವಾಹದ ನಂತರ ಸುಖವಾಗಿ ಚೆನ್ನಾಗಿಯೇ ಇದ್ದಳು. ಶಬೀರನಲ್ಲಂತೂ ಯಾವ ಬಗೆಯ

ಕೊರತೆಯೂ ಇರಲಿಲ್ಲ. ಆದರೆ ಈ ದಿನದ ಘಟನೆಯನ್ನು ಕೇಳಿದ ನಂತರ ಆತನಿಗೂ ಅಳಿಯನನ್ನು ಕರೆಸುವುದೇ ಒಳ್ಳೆಯದೆಂದು ತೋರಿತು. ಹೀಗಾಗಿ ಅವರು ಶಬೀರ್ ಗೆ ಹೆಂಡತಿಯ ಸ್ಥಿತಿಯನ್ನು ವಿವರಿಸಿ ಒಮ್ಮೆ ಬಂದು ಹೋಗುವಂತೆ ಪತ್ರ ಬರೆದರು.

ಪತ್ರ ತಲುಪಿದ ಬಳಿಕ ಒಂದೆರಡು ವಾರದೊಳಗೆ ಶಬೀರ್ ಧಾವಿಸಿ ಊರಿಗೆ ಬಂದವನೇ ಮೊದಲು ಸಮೀರಾಳನ್ನು ಕಂಡನು. ಸಂಪೂರ್ಣವಾಗಿ ಬದಲಾಗಿದ್ದ ಹೆಂಡತಿಯನ್ನು ನೋಡಿ ಅವನು ದಿಗ್ಭ್ರಮೆಗೊಂಡನು. ಮೊದಲೆಲ್ಲಾ ಶಬೀರ್ ದುಬಾಯಿಂದ ಊರಿಗೆ ಬಂದಾಗ ಸಮೀರಾ ಕೈತುಂಬ ಮದರಂಗಿ ಹಚ್ಚಿಕೊಂಡು, ತಲೆಗೆ ಮಲ್ಲಿಗೆ ಮುಡಿದು, ಗಂಡ ತಂದಿದ್ದ ಸುಗಂಧ ದ್ರವ್ಯವನ್ನು ಮತ್ತೇರಿಸುವಂತೆ ಮೈತುಂಬ ಸಿಂಪಡಿಸಿಕೊಂಡು ಅವನನ್ನು ಬಹಳ ಪ್ರೀತಿಯಿಂದ, ನಲ್ಮೆಯಿಂದ ಸ್ವಾಗತಿಸುತ್ತಿದ್ದಳು. ಆದರೆ ಈಗ ಬಿಳಿಚಿದ ಮುಖ, ಕೆದರಿದ ತಲೆ, ಮಂಕು ಕವಿದ ಕಣ್ಣುಗಳು, ಚಿಂತೆಯಿಂದ ಸೊರಗಿ ತೆಳ್ಳಗಾಗಿದ್ದಳು. ಇದನ್ನೆಲ್ಲಾ ಕಂಡು ಶಬೀರನ ಹೃದಯ ಹಿಂಡಿದಂತಾಯಿತು. "ಸಮೀರಾ ಏನಾಗಿದೆ ನಿನಗೆ? ನನ್ನೊಂದಿಗೆ ಮಾತನಾಡುವುದಿಲ್ಲವೇ..?" ಎಂದು ಆತ ಕೇಳಿದಾಗ ಆಕೆಯ ಕಣ್ಣುಗಳಿಂದ ನೀರುದುರತೊಡಗಿತು. ಅಳಬೇಡ ಎಂದು ಅವಳನ್ನು ಸಂತೈಸುವಾಗ ಅವನ ಕೈಯನ್ನು ಕಿತ್ತೆಸೆದು ಕೋಣೆಯಿಂದ ಹೊರಗೋಡಿದಳು. ಆಘಾತಗೊಂಡ ಶಬೀರ್ ಹೆಂಡತಿಗೆ ದೈಹಿಕವಾಗಿಯೋ, ಮಾನಸಿಕವಾಗಿಯೋ ಏನೋ ಆಗಿದೆ ಎಂಬುದನ್ನು ಮನಗಂಡು ಆಕೆಯನ್ನು ಮರುದಿನ ಮನೋರೋಗ ತಜ್ಞರ ಬಳಿಗೆ ಕೊಂಡೋಯ್ದನು. ಡಾಕ್ಟರ್ ಸಮೀರಾಳ ಕುರಿತು ಆತನಿಂದ ಸಂಪೂರ್ಣ ಮಾಹಿತಿಯನ್ನು ಪಡೆದರು. ಶಬೀರ್ ತನಗೆ ತಿಳಿದ ವಿಚಾರವನ್ನೆಲ್ಲ ಅವರಿಗೆ ತಿಳಿಸಿದನು.

ಸಮೀರಾ ಹಸನ್ ಬ್ಯಾರಿಯ ಹಿರಿಯ ಮಗಳು. ತಂದೆ ವ್ಯಾಪಾರಿ ವೃತ್ತಿಯಲ್ಲಿದ್ದರೂ ತಕ್ಕಮಟ್ಟಿಗೆ ಸಂಪಾದನೆ ಇತ್ತು, ಉಣ್ಣಲು ಉಡಲು ಕೊರತೆ ಇರಲಿಲ್ಲ. ಅವಳಿಗೆ ಹನ್ನೊಂದು ವರ್ಷವಾದಾಗ ಆರನೆಯ ತರಗತಿಯಲ್ಲಿ ಓದುತ್ತಿದ್ದಳು. ಹೀಗೆ ಶಾಲೆ ಮುಗಿಸಿ ಮನೆಗೆ ಬರುವಾಗ ರಸ್ತೆಯಲ್ಲಿ ಗೆಳತಿಯರೊಂದಿಗೆ ಜೋರಾಗಿ ನಗುತ್ತಾ, ಹರಟುತ್ತಾ ಸಾಗಿದವಳಿಗೆ ತನ್ನ ಸುತ್ತಲಿನ ಪರಿವೆಯೇ ಇರಲಿಲ್ಲ. ತಂದೆ ಎದುರಿನಿಂದ ಸಾಗಿದರು ಅವಳು ಯಾವುದನ್ನು ಗಮನಿಸಲೇ ಇಲ್ಲ. ಇದನ್ನು ಕಂಡ ಹಸನ್ ಬ್ಯಾರಿ ಮನೆಗೆ ಮರಳಿ ಹೆಂಡತಿಗೆ ಜೋರು ಮಾಡಿ, "ಇಷ್ಟು ದೊಡ್ಡ ಮುಸ್ಲಿಂ ಹುಡುಗಿ ಬುರ್ಕಾ ಇಲ್ಲದೆ ಬೀದಿಯಲ್ಲಿ ಈ ರೀತಿ ಓಡಾಡುವುದು ಸರಿಯಲ್ಲ. ಮಗಳಿಗೆ ಮದುವೆ ಮಾಡಬೇಕು, ಇನ್ನು ಮುಂದೆ ಆಕೆಯನ್ನು ಶಾಲೆಗೆ ಕಳಿಸಬಾರದು" ಎಂದು ಆದೇಶ ಮಾಡುವನು. ಅಲ್ಲಿಗೆ ಸಮೀರಾಳ ವಿದ್ಯಾಭ್ಯಾಸ ಕೊನೆಯಾಯಿತು. ಇಲ್ಲಿ ಗಂಡಸರು ಹೆಂಗಸರನ್ನು, ತಮ್ಮ ಆದೇಶವನ್ನು ಮೀರದಂತೆ ಹೇಗೆಲ್ಲ ನಿಯಂತ್ರಿಸುತ್ತಿದ್ದರು ಎಂಬುದು ವ್ಯಕ್ತವಾಗಿದೆ. ಹಾಗೂ ಇಂದಿನ ಸಮಾಜದಲ್ಲೂ ಕೂಡ ಬುರ್ಕಾ ತೊಡದೆ ಯಾವುದೇ ಮುಸ್ಲಿಂ ಹೆಣ್ಣು ಮಕ್ಕಳು ರಸ್ತೆಯಲ್ಲಿ ಸಂಚರಿಸುವಂತಿಲ್ಲ. ಇದು ಅವರ ಧರ್ಮದಲ್ಲಿ ಅನುಸರಿಸಲೇಬೇಕಾದ ನಿಯಮಗಳನ್ನು ಎತ್ತಿತೋರಿಸುತ್ತದೆ ಮತ್ತು ಸಮೀರಾಳಂತಹ ಎಷ್ಟೋ ಹುಡುಗಿಯರು ಇಂದಿಗೂ

ಶಿಕ್ಷಣ ಸಿಗದೇ ವಂಚಿತರಾಗಿದ್ದಾರೆ.

ಶಾಲೆ ಬಿಟ್ಟಾಗಿನಿಂದ ಸಮೀರಾ ಎಲ್ಲೂ ಹೊರಗೆ ಹೋಗುತ್ತಿರಲಿಲ್ಲ. ಸದಾ ಬಾಣಂತಿಯಾಗಿಯೋ, ಬಸರಿಯಾಗಿಯೋ ಇರುತ್ತಿದ್ದ ತಾಯಿಯ ಆರೈಕೆಯ ಜೊತೆಗೆ ಮನೆಗೆಲಸವನ್ನೆಲ್ಲಾ ಆಕೆಯೇ ನಿರ್ವಹಿಸುತ್ತಿದ್ದಳು. ಸಮೀರಾಳಿಗೆ ಹದಿನೈದು ವರ್ಷವಾದಾಗ ಅವಳ ವಿವಾಹವಾಯಿತು. ಶಬೀರ್ ಹೊರ ದೇಶದಲ್ಲಿ ಕೆಲಸ ಮಾಡುತ್ತಿದ್ದುದರಿಂದ ಮದುವೆಯ ನಂತರ ಅವನು ಊರಲ್ಲಿದ್ದುದು ಹತ್ತೇ ದಿನಗಳ ಕಾಲ ಮಾತ್ರ. ಆದರೆ ಆ ಹತ್ತು ದಿನಗಳಲ್ಲಿ ಹೆಂಡತಿಯ ಭಾವನೆಗಳನ್ನು ಅರಿತು, ಪ್ರೀತಿ, ನಂಬಿಕೆ ಮತ್ತು ಪರಸ್ಪರ ಅರ್ಥೈಸಿಕೊಳ್ಳುವಿಕೆ ಅವರಿಬ್ಬರ ನಡುವೆ ನೆಲೆಯೂರಿತು. ಹಾಗೂ ಅವರ ಸಾನ್ನಿಧ್ಯವು ಪ್ರೀತಿ ಮತ್ತು ಆತ್ಮೀಯತೆಯನ್ನು ಇನ್ನಷ್ಟು ಗಟ್ಟಿಗೊಳಿಸಿತು. ಈ ಮಿಲನದಿಂದ ಮನಸ್ಸಿನ ಸಾಮೀಪ್ಯ ಹಾಗೂ ದಾಂಪತ್ಯ ಬಂಧನ ಬಲವಾಯಿತು. ಹೀಗೆ ಶಬೀರ್ ಜೇನಿನ ಮಳೆಯನ್ನು ಸುರಿಸಿ ಹಾಲಿನ ಹೊಳೆಯಲ್ಲಿ ಸಮೀರಾಳನ್ನು ತೇಲಿಸಿದನು. ಇದರಿಂದ ಅವಳಿಗೆ ಗಂಡನನ್ನು ಮರಳಿ ಕಳಿಸುವುದು ಇಷ್ಟವಿರಲಿಲ್ಲ. ಜೊತೆಗೆ ಆತನ ಅಗಲಿಕೆಯ ನಂತರ ತೀವ್ರವಾದ ವಿರಹವೇದನೆಯನ್ನು ಅನುಭವಿಸತೊಡಗಿದಳು. ಮನೆಯೊಳಗಿನ ವಿಶ್ರಾಂತಿ ಇಲ್ಲದ ದುಡಿಮೆ ಆಕೆಗೆ ಗಂಡನ ನೆನಪಿಗೂ ಅವಕಾಶ ಮಾಡಿಕೊಡುತ್ತಿರಲಿಲ್ಲ. ನಾಲ್ಕು ಗೋಡೆಗಳ ಮಧ್ಯೆ ಯಾವುದೇ ಮನರಂಜನೆ ಇಲ್ಲದ ಅವಳು ಮಾನಸಿಕವಾಗಿ ದುರ್ಬಲಳಾಗುತ್ತಿದ್ದಳು. ಹೀಗೆ ಒಂದೂವರೆ ವರ್ಷ ಕಳೆಯಿತು.

ಶಬೀರ್ ಒಂದೂವರೆ ತಿಂಗಳ ರಜೆ ಪಡೆದು ಊರಿಗೆ ಬಂದು ಹೆಂಡತಿಯನ್ನು ತನ್ನೂರಿಗೆ ಕರೆದುಕೊಂಡು ಹೋದನು. ಊರಿನಲ್ಲಿದ್ದು ಬೇಸರವಾದ ಕಾರಣ ತಾಯಿ 'ಖದೀಜ' ಮತ್ತು ತನ್ನ ತಮ್ಮಂದಿರನ್ನು ಕರೆದುಕೊಂಡು ಹೆಂಡತಿಯೊಡನೆ ಮಂಗಳೂರಿಗೆ ಪ್ರವಾಸಕ್ಕೆ ತೆರಳಿದನು. ಅಲ್ಲಿ ಹೋಟೆಲ್ ರೂಮಿನಲ್ಲಿದ್ದು ವಿವಿಧ ಬಗೆಯ ಊಟ ತಿಂಡಿಗಳನ್ನು ತಿನ್ನಿಸಿ, ಟ್ಯಾಕ್ಸಿ ಮಾಡಿಕೊಂಡು ಅವರನ್ನು ಊರೆಲ್ಲಾ ಸುತ್ತಿಸಿದನು. ಹಣದ ಹೊಳೆಯನ್ನು ಹರಿಸುತ್ತ ತನ್ನ ಪರಿವಾರವನ್ನು ಆನಂದ ಸಾಗರದಲ್ಲಿ ತೇಲಿಸಿದನು. ಅಂದು ರಾತ್ರಿ ಶಬೀರ್ ಸಮೀರಾಳೊಂದಿಗೆ ಸಿನಿಮಾಗೂ ಹೋಗಿ ಬಂದನು. ಮರುದಿನ ಬೆಳಗ್ಗೆ ಊರಿಗೆ ಮರಳಲು ಮುಂದಾದರು. ಊರಿಗೆ ಬಂದಾಗ ಮನೆಯ ಮುಂದೆ ಗೇಟಿನ ಬಳಿ ಯಾರೋ ನಿಂತಿರುವುದು ಕಾಣಿಸಿತು. ಖದೀಜಳಿಗೆ ಅವರ ಗುರುತು ಸಿಕ್ಕಿ, "ಓ ಅಣ್ಣ ಬಂದು ತುಂಬಾ ಸಮಯವಾಯಿತೇ?" ಎಂದು ಮಾತಿಗಿಳಿದಳು. ಹಸನ್ ಬ್ಯಾರಿ ಅಸಮಾಧಾನದಿಂದ, "ಎಲ್ಲಿಗೆ ಹೋಗಿದ್ದೀರಿ..?" ಎಂದು ಕೇಳಿದನು. "ಮಂಗಳೂರಿಗೆ ಹೋಗಿದ್ದೆವು" ಎಂದು ಖದೀಜ ನಡೆದ ವೃತ್ತಾಂತವನ್ನೆಲ್ಲ ಹೇಳಿದಳು. ಇದನ್ನೆಲ್ಲಾ ಕೇಳಿ ಕೋಪದಿಂದ ಅವನು ಆಶ್ಚರ್ಯಚಕಿತನಾದನು. ಸಿಡಿಲು ಗುಡುಗುಗಳ ಅಬ್ಬರದಂತಿದ್ದ ತನ್ನ ಮಾತಿನಿಂದ ಎಲ್ಲರನ್ನು ಬೈಯುತ್ತಾ, ಅವನು ತಕ್ಷಣ ಶಾಂತಗೊಂಡು ಅಳಿಯನಿಗೆ ಹೀಗೆ ಬುದ್ಧಿ ಹೇಳಲು ಪ್ರಾರಂಭಿಸಿದನು.

"ಹೆಂಗಸರನ್ನು ಕಾಲಿನ ಚಪ್ಪಲಿಯಂತೆ ಬಳಸಿಕೊಳ್ಳಬೇಕು. ಬೇಕೆಂದಾಗ ಉಪಯೋಗಿಸಿ ಬೇಡವಾದಾಗ ಮೂಲೆಯಲ್ಲಿ ಬಿಟ್ಟುಬಿಡಬೇಕು. ಅದು ಬಿಟ್ಟು ತಲೆಯ ಮೇಲಿಟ್ಟುಕೊಂಡರೆ ಹೇಗೆ..? ಚಪ್ಪಲಿಯನ್ನು ಎಲ್ಲಿ ಬೇಕೋ ಅಲ್ಲೇ ಇಡಬೇಕು". ಮಾವನ ಈ ಮಾತುಗಳನ್ನು ಕೇಳಿದ ಶಬೀರ್ ಗೆ ಭಾರಿ ಸಿಟ್ಟು ಬಂದಿತು. ಹಿರಿಯರೊಡನೆ ವಾದಿಸುವುದು ತನ್ನ ತಾಯಿಗೆ ಇಷ್ಟವಾಗುವುದಿಲ್ಲ ಎಂಬ ಒಂದೇ ಕಾರಣದಿಂದ ಸುಮ್ಮನಿದ್ದನು. ಸಮೀರಾ ಒಳಗಿನಿಂದ ತಂದೆಯ ಈ ಮಾತುಗಳನ್ನು ಕೇಳಿದ ನಂತರ ಆಘಾತಗೊಂಡು, ತಂದೆ ತಮ್ಮನ್ನೆಲ್ಲಾ ಚಪ್ಪಲಿಗೆ ಹೋಲಿಸಿಬಿಟ್ಟರಲ್ಲಾ ಎಂದು ವಿಪರೀತ ಸಿಟ್ಟು ಮಾಡಿಕೊಂಡಳು.

ಹಸನ್ ಬ್ಯಾರಿಯ ಈ ಹೇಳಿಕೆ ಎಂತವರಿಗಾದರೂ ಆಕ್ರೋಶ ಹುಟ್ಟುವಂತೆ ಮಾಡುತ್ತದೆ. ಸಮಾಜದಲ್ಲಿ ಇಂತಹ ಆಲೋಚನೆಗಳಿರುವ ವ್ಯಕ್ತಿಗಳಿರುವುದರಿಂದಲೇ ಇವತ್ತಿಗೂ ಸ್ತ್ರೀಯರು ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುವುದರಲ್ಲಿ ಸೋಲುತ್ತಲೇ ಇದ್ದಾರೆ. ಪ್ರವಾಸ, ಸಿನಿಮಾಗಳಿಗೆ ಮಹಿಳೆಯರು ಹೋಗುವುದು ಆತನ ಪಾಲಿಗೆ ಏನೋ ಮಹಾಪರಾಧ ಮಾಡಿದಂತೆ ತೋರುತ್ತದೆ. ಹಾಗೂ ಮುಖ್ಯವಾಗಿ 'ಹೆಂಗಸರನ್ನು ಕಾಲಿನ ಚಪ್ಪಲಿಗಳಿಗೆ' ಹೋಲಿಸಿರುವುದು, ಚಪ್ಪಲಿ ಎನ್ನುವುದು ಉಪಯೋಗಿಸಿ ಬಿಸಾಡುವ ವಸ್ತುವಿನ ಸಂಕೇತ. ಅದಕ್ಕೆ ಮಹಿಳೆಯರನ್ನು ಹೋಲಿಸಿರುವುದು ಅವರ ಗೌರವ, ಸ್ವತಂತ್ರ ವ್ಯಕ್ತಿತ್ವ ಮತ್ತು ಸಮಾನ ಹಕ್ಕುಗಳನ್ನು ಕುಗ್ಗಿಸುವ ಪ್ರಯತ್ನವಾಗಿದೆ. ಮಾನವೀಯತೆಯನ್ನು ಹಾಗೂ ತನಗೆ ಜನ್ಮ ನೀಡಿದವಳು ಒಬ್ಬಳು ಸ್ತ್ರೀ ಎಂಬುದನ್ನು ಮರೆತು ನೀಡಿದ ಈ ಹೇಳಿಕೆಯು ತೀರಾ ಅವಮಾನಕಾರಿಯಾಗಿದೆ.

ಶಬೀರ್ ದುಬಾಯಿಗೆ ಹೋಗುವವರೆಗೂ ಆತನೊಡನೆ ಇರಬೇಕೆಂದು ಕೊಂಡಿದ್ದ ಸಮೀರಾಳನ್ನು, ತಾಯಿಗೆ ಹೆರಿಗೆಯಾಗಿದೆ ಎಂದು ಹಸನ್ ಬ್ಯಾರಿ ಆಕೆಯನ್ನು ತನ್ನೊಂದಿಗೆ ಕರೆದುಕೊಂಡು ಹೋಗುವನು. ತಾಯಿಯ ಮನೆಯಲ್ಲಿ ಗುಲಾಮಗಿರಿ ಮಾಡುತ್ತಿದ್ದ ಸಮೀರಾಳಿಗೆ ತಾಯಿಯನ್ನು ನೋಡಿದಾಗಲೆಲ್ಲ 'ನಿನ್ನ ತಂದೆ, ತಾಯಿಯನ್ನು ಚಪ್ಪಲಿಯಂತೆಯೇ ಉಪಯೋಗಿಸುತ್ತಿದ್ದಾರೆ' ಎಂದು ಶಬೀರನೆಂದ ಮಾತು ನೆನಪಾಗುತ್ತಿತ್ತು. ಹೀಗೆ ಒಮ್ಮೆ ಶಬೀರ್ ಊರಿಗೆ ಬರುವನೆಂದು ತಿಳಿದು ಅಳಿಯನನ್ನೆದುರುಗೊಳ್ಳಲು ಹಸನ್ ಬ್ಯಾರಿ ವಿಮಾನ ನಿಲ್ದಾಣಕ್ಕೆ ಹೋಗಬೇಕಾಗುತ್ತದೆ. ಸಮೀರಾ ತಾನು ಬರುವೆನೆಂದು ಕೇಳಿದಾಗ, "ಮಾನ ಮರ್ಯಾದೆ ಎಲ್ಲ ಬಿಟ್ಟಿರುವಳು, ಗಂಡುಬೀರಿ" ಎಂದು ಅವಳನ್ನು ಗದರಿಸಿದನು. ತಂದೆಯ ಮಾತನ್ನು ಕೇಳಿ ಆಕೆಯ ಆಸೆ ಕಮರಿ ಹೋಯಿತು. ಈ ಮುಸ್ಲಿಂ ಸಮುದಾಯದಲ್ಲಿ ಹುಟ್ಟಿದ ಸ್ತ್ರೀಯರಿಗೆ ಮದುವೆಗೂ ಮುನ್ನ ಮತ್ತು ಮದುವೆಯ ನಂತರವೂ ಕೂಡ ಯಾವುದೇ ಸ್ವಾತಂತ್ರ್ಯವಿರುವುದಿಲ್ಲ, ಅವರು ಸದಾ ಕಾಲ ಸೆರೆಮನೆಯ ವಾಸಿಗಳಾಗಿರುತ್ತಾರೆ ಎಂಬುದನ್ನು ನಾವು ಇಲ್ಲಿ ಅರ್ಥೈಸಿಕೊಳ್ಳಬೇಕಾಗಿದೆ. ಹಾಗೂ ಹಸನ್ ಬ್ಯಾರಿಯಂತಹ ಕಠೋರ ಸ್ವಭಾವದ ತಂದೆ ಸಿಕ್ಕಿರುವುದು ಸಮೀರಾಳ ದೌರ್ಭಾಗ್ಯವೇ ಸರಿ.

ಹೀಗೆ ಶಬೀರ್ ಊರಿಗೆ ಬಂದ ನಂತರ ತಾಯಿಯ ಬಾಣಂತಿಯ ಕೆಲಸದಲ್ಲಿ ಮಗ್ನಳಾಗಿರುವ ಸಮೀರಾಳಿಗೆ ಮಾತನಾಡಲೂ ಪುರುಸೊತ್ತಿರಲಿಲ್ಲ. ಸಮಯ ಸಿಕ್ಕಾಗ ಗಂಡನೊಂದಿಗೆ ತನ್ನ ದುಃಖವನ್ನು ತೋಡಿಕೊಂಡು, "ತನ್ನನ್ನು ನಿಮ್ಮೊಡನೆ ಕರೆದುಕೊಂಡು ಹೋಗಿ" ಎಂದು ಕೇಳಿದಳು. ಆದರೆ ಕಾರಣಾಂತರಗಳಿಂದ ಶಬೀರ್ ಗೆ ಅದು ಸಾಧ್ಯವಾಗುತ್ತಿರಲಿಲ್ಲ. ಹೆಂಡತಿಯ ಗೋಳನ್ನು ನೋಡಲಾಗದೆ ಅವನಿಗೆ ತನ್ನ ಮಾವನ ಮೇಲೆ ರೋಷ ತಿರುಗಿ, "ನಿನ್ನ ತಂದೆ ಎಂತಹ ಮನುಷ್ಯ, ಅವರು ನಿನ್ನ ತಾಯಿಗೆ ಮಾತ್ರವಲ್ಲ ನಿನಗೆ, ನನಗೆ ಎಲ್ಲರಿಗೂ ಶಿಕ್ಷೆ ಕೊಡುತ್ತಿದ್ದಾರೆ" ಎಂದನು. ಇದಕ್ಕೆ ಪ್ರತಿಯಾಗಿ ಸಮೀರಾ, "ಗಂಡಸರ ಪಾಲಿಗೆ ಹೆಂಗಸೆಂದರೆ ಚಪ್ಪಲಿ ತಾನೆ..? ಸವೆಯುವವರೆಗೂ ಉಪಯೋಗಿಸುವುದು. ಸವೆದ ಮೇಲೆ ಇನ್ನೊಂದು ತಂದು ಬಿಡುವುದು" ಎಂದಳು. ಅವಳ ಈ ಮಾತನ್ನು ಕೇಳಿ ಶಬೀರ್ ಕೆರಳಿದನು. ಹಾಗೆ "ತನ್ನ ಪಾಲಿಗೆ ನೀನೆಂದೂ ಚಪ್ಪಲಿಯಲ್ಲ" ಎಂದು ಅವಳನ್ನು ಸಮಾಧಾನಿಸಿದನು. ಮರುದಿನ ಮತ್ತೆ ಹೊರಟು ಹೋಗುವನು.

ಸಮೀರಾಳ ಈ ಮಾತಿನ ಹಿಂದೆ ಆಕೆ ಇಷ್ಟು ದಿನ ಅನುಭವಿಸಿರುವ ಕಷ್ಟ ನೋವುಗಳು ವ್ಯಕ್ತವಾಗಿವೆ. ಮತ್ತು ಇದು ಅವುಗಳಿಗೆ ಮಾತ್ರ ಸೀಮಿತವಾಗಿರದೆ, ತನ್ನ ತಂದೆ ಹೆಂಗಸರನ್ನು ಕುರಿತು ಹೇಳಿದ ಮಾತುಗಳು ಆಕೆಯ ಮೇಲೆ ಆಳವಾದ ಪರಿಣಾಮ ಬೀರಿದವು. ಅಂದಿನಿಂದ ಮೌನವಾಗಿದ್ದು, ತಾನು ಅನುಭವಿಸಿದ ಮಾನಸಿಕ ವೇದನೆಯನ್ನು ತನ್ನ ಆಕ್ರೋಶದ ಈ ನುಡಿಗಳ ಮೂಲಕ ಹೊರ ಹಾಕಿರುವುದನ್ನು ನಾವು ಗಮನಿಸಬೇಕಾಗಿದೆ.

ಸಮೀರಾಳ ಚರಿತ್ರೆಯನ್ನೆಲ್ಲ ಕೇಳಿದ ಡಾಕ್ಟರು ಶಬೀರ್ ಗೆ ಇತ್ತೀಚಿನ ದಿನಗಳಲ್ಲಿ ಹೀಗೆ ನಡೆದಿರುವ ಕೆಲವು ನಿದರ್ಶನಗಳನ್ನು ಹೇಳಿದರು ಮತ್ತು ಅವಳನ್ನು ಒಂಟಿಯಾಗಿ ಬಿಡದೆ ಅವಳೊಂದಿಗೇ ಇರುವ ಸಲಹೆಯನ್ನು ನೀಡಿದರು. ಹಾಗೆ ಮಾಡಿದರೆ ಮಾತ್ರ ಸಮೀರಾ ಮಾನಸಿಕವಾಗಿ ಸ್ಥಿರವಾಗಲು ಸಾಧ್ಯ ಎಂದರು. ಹೆಂಡತಿಯ ಚಿಕಿತ್ಸಾ ವಿವರಗಳನ್ನು ಕೇಳುತ್ತಾ ಶಬೀರ್ ತಾನು ಊರಿನಲ್ಲಿಯೇ ಇರಲು ತೀರ್ಮಾನಿಸಿದನು.

ಹೀಗೆ ಪ್ರಸ್ತುತ ಕಥೆಯಲ್ಲಿ ಸಮಾಜದಲ್ಲಿ ಶೋಷಣೆಗೆ ಒಳಗಾಗಿರುವ ಎಲ್ಲ ಸ್ತ್ರೀಯರ ಸ್ಥಿತಿಗತಿಗಳು ವ್ಯಕ್ತವಾಗಿವೆ. 1947 ರಲ್ಲೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದರೂ, ಮಹಿಳೆಯರ ಪಾಲಿಗೆ ಮಾತ್ರ ಅವರು ಬಯಸಿದ ಸ್ವಾತಂತ್ರ್ಯ ಇಂದಿಗೂ ಸಿಕ್ಕಿಲ್ಲ. ದಿನನಿತ್ಯವೂ ದೈಹಿಕವಾಗಿ ಅಲ್ಲದಿದ್ದರೂ ಮಾನಸಿಕವಾಗಿ ಒಂದಲ್ಲ ಒಂದು ರೀತಿಯಲ್ಲಿ ಅವರು ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ. ಯಾವುದೇ ಮನರಂಜನೆ ಇಲ್ಲದೆ ನಾಲ್ಕು ಗೋಡೆಗಳ ಮಧ್ಯೆ ಮನೆಯಿಂದ ಹೊರಗೆ ಕಾಲಿಡಲಾಗದಂತಹ ಬಂಧನ ಸಮೀರಾಳನ್ನು ಮಾನಸಿಕ ಖಿನ್ನತೆಗೆ ಒಳಗಾಗಿಸಿರುವುದು ವಿಷಾದದ ಸಂಗತಿ. ಸ್ತ್ರೀ ಸಂವೇದನೆಯ ದೃಷ್ಟಿಯಿಂದ ನೋಡಿದರೆ, ಈ ಕಥೆ ಮಹಿಳೆಯ ಒಳಗಿನ ನೋವು, ಅವಳ ಅಸಹಾಯಕತೆ ಮತ್ತು ಸಮಾಜದ ಅನ್ಯಾಯದ ವಿರುದ್ಧದ ಮೌನ

ಪ್ರತಿರೋಧವನ್ನು ವ್ಯಕ್ತಪಡಿಸುತ್ತದೆ. ಡಾ. ಸಾರಾ ಅಬೂಬಕ್ಕರ್ ಅವರು ಮಹಿಳೆಯ ಅಂತರಂಗದ ಧ್ವನಿಯನ್ನು ಸೂಕ್ಷ್ಮವಾಗಿ ಹಿಡಿದು, ಸಮಾಜಕ್ಕೆ ತೀಕ್ಷ್ಣ ಪ್ರಶ್ನೆಯನ್ನು ಎಸೆಯುವ ಮೂಲಕ ಈ ಕಥೆಯನ್ನು ರಚಿಸಿದ್ದಾರೆ.

ಸಾರಾ ಅವರ ಈ ಕಥೆಗೆ ನಿದರ್ಶನವೆಂಬಂತೆ ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಬರಹಗಾರ್ತಿಯರಲ್ಲಿ ಒಬ್ಬರಾದ ಡಾ. ವೀಣಾ ಶಾಂತೇಶ್ವರ ಅವರು ಸ್ತ್ರೀ ಸಂವೇದನೆಯ ಹಿನ್ನೆಲೆಯಲ್ಲಿ "ತಿರುಗಿ ಹೋದವಳು" ಕಥೆಯನ್ನು ರಚಿಸಿರುವರು. ಹಮೀದಾ ಬಾನು ಮತ್ತು ಲಕ್ಷ್ಮೀ ಎಂಬ ಇಬ್ಬರು ಯುವತಿಯರು ಇಲ್ಲಿನ ಕೇಂದ್ರಬಿಂದುಗಳಾಗಿರುತ್ತಾರೆ. ಹಮೀದಾ ಹುಟ್ಟಿದಾಗಲೇ ತಾಯಿಯನ್ನು ಕಳೆದುಕೊಂಡಿರುತ್ತಾಳೆ. ಅಜ್ಜಿ ಇಮಾಮ್ ಬೀ ಆ ಪುಟ್ಟ ಶಿಶುವನ್ನು ತಂದು ಚಿಕ್ಕ ವಯಸ್ಸಿನಿಂದಲೇ ಅದರ ಲಾಲನೆ ಪಾಲನೆ ಮಾಡುತ್ತಾ ಬಹಳ ಪ್ರೀತಿಯಿಂದ, ಮುದ್ದಾಗಿ ಸಾಕಿದಳು. ಒಮ್ಮೆ ಆಕೆಯ ತಮ್ಮ ಹುಸೇನ್ ಸಾಬನ ಮೊಮ್ಮಕ್ಕಳ ಮದುವೆ ಇದೆ ಎಂದು ಹಮೀದಾಳನ್ನು ಬೆಳಗಾವಿಗೆ ಕಳುಹಿಸಿ ಕೊಡುವಳು. ಆದರೆ ಅಲ್ಲಿ ವಿಚಿತ್ರವಾದ ಘಟನೆಯೊಂದು ನಡೆಯುವುದು; ಹಣದ ವ್ಯಾಮೋಹದಿಂದ ಹುಸೇನ್ ಸಾಬ, ಹಮೀದಾಳನ್ನು ನಡುವೆ ಮುದುಕನಾದ ಮಹಮ್ಮದ ಗೌಸ ಎಂಬುವನ ಜೊತೆಗೆ ವಿವಾಹ ಮಾಡಿಸಿ ಬಿಡುವುದು. ಗೌಸನು ಲಖನೌನಲ್ಲಿ ವೃತ್ತಿ ಜೀವನ ನಡೆಸುತ್ತಿದ್ದ ಕಾರಣ, ಅವನು ವರ್ಷಕ್ಕೆ ಒಂದು ಬಾರಿ ಬಂದು ತಿಂಗಳಾನುಗಟ್ಟಲೆ ಅತ್ತೆ ಮನೆಯಲ್ಲಿ ಉಳಿದು, ಅವರ ಹಣವನ್ನೆಲ್ಲ ಖರ್ಚು ಮಾಡಿಸಿ, ಹಮೀದಾಳ ಕೈಗೊಂದು ಕೂಸು ಕೊಟ್ಟು ಅಜ್ಜಿ ಮೊಮ್ಮಗಳಿಬ್ಬರನ್ನು ಕಷ್ಟಗಳ ಸುಳಿಯಲ್ಲಿ ಸಿಲುಕಿಸಿ ಹೋಗುತ್ತಿದ್ದ. ಪ್ರತಿ ವರ್ಷವೂ ಇದೇ ನಡೆಯುತ್ತಿದ್ದುದರಿಂದ ಇಮಾಮ್ ಬೀ ಗೆ ರೋಸಿಹೋಗಿತ್ತು. ಲಕ್ಷ್ಮಿ ಇದನ್ನು ಎಲ್ಲಾ ಗಮನಿಸುತ್ತಾ ಹಮೀದಾಳಿಗೆ ಬೈದು ಬುದ್ಧಿ ಹೇಳುತ್ತಿದ್ದಳು. ಅವಳು ಎಂ.ಕಾಂ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣಳಾದುದ್ದರಿಂದ ಅವರಿಗೆ ಬ್ಯಾಂಕ್ ಹುದ್ದೆ ದೊರಕಿತು. ಅಲ್ಲಿ ತನ್ನ ಸಹೋದ್ಯೋಗಿಯಾದ ಸುರೇಶನನ್ನು ಪ್ರೀತಿಸಿ ಮದುವೆಯಾದಳು.

ನಂತರ ಮುಂಬೈಗೆ ವರ್ಗಾವಣೆಯಾಯಿತು. ಪ್ರಾರಂಭದಲ್ಲಿ ಎಲ್ಲವೂ ಚೆನ್ನಾಗಿಯೇ ಇದ್ದವು, ಆದರೆ ಈಗೀಗ ಸುರೇಶನ ನಡವಳಿಕೆ ಬದಲಾಗುತ್ತಿತ್ತು. ಅವನ ಅಕ್ಕನ ಮಗಳಾದ ರೇಖಾಳೊಂದಿಗೆ ತೀರಾ ಸಲುಗೆಯಿಂದ ವರ್ತಿಸುತ್ತಿದ್ದ. ಅವರಿಬ್ಬರ ಈ ಸಂಬಂಧದ ಬಗ್ಗೆ ಲಕ್ಷ್ಮೀಗೆ ಸಂದೇಹ ಉಂಟಾಯಿತು. ಅದರಿಂದ ಗಂಡ ಹೆಂಡತಿಯ ಮಧ್ಯೆ ಮನಸ್ತಾಪಗಳಾಗಿ ಅವಳು ತನ್ನ ತವರು ಮನೆಗೆ ತೆರಳಿದಳು. ಅವಳಿಗೆ ಒಂದು ಮಗುವೂ ಆಯಿತು, ಅವಳ ಹೆರಿಗೆ ಸಮಯದಲ್ಲೂ ಸಹ ಗಂಡ ಬರಲಿಲ್ಲ. ಕೆಲಸದ ಒತ್ತಡದಿಂದ ಅವರು ಬರಲು ಸಾಧ್ಯವಾಗಲಿಲ್ಲ ಎಂದು ತಂದೆ ತಾಯಿಯ ಮುಂದೆ ತನ್ನ ಗಂಡನ ಪರ ವಕೀಲಗಿರಿ ಮಾಡುವಳು. ಬಳಿಕ ಮಗುವಿನೊಂದಿಗೆ ಮುಂಬೈಗೆ ಮರಳಿದಳು. ಆದರೆ ಅಲ್ಲಿ ಸುರೇಶನ ನಡತೆ ಇನ್ನೂ ಬದಲಾಗಿತ್ತು, ಆದ್ದರಿಂದ ಲಕ್ಷ್ಮೀಯ ಮನಸ್ಸಿಗೆ ಘಾಸಿಯುಂಟಾಗಿ ಪುನಃ ತಂದೆ ಮನೆಗೆ ಹೋಗುವಳು. ಹೀಗೆ ದಿನ ಕಳೆಯುತ್ತಿದ್ದಂತೆ ತನ್ನ ಮಗುವಿನ ಭವಿಷ್ಯದ ಬಗ್ಗೆ

ಚಿಂತಿಸುತ್ತಾ ಮತ್ತೆ ಮುಂಬೈಗೆ ತಿರುಗಿ ಹೊರಡುವಳು.

ಈ ಕಥೆಯ ಇಬ್ಬರು ಹೆಣ್ಣು ಮಕ್ಕಳ ಪಾತ್ರದಲ್ಲೂ ಸತ್ವವಿದೆ. ಒಬ್ಬಳು ಯಾರದ್ದೋ ದುರಾಸೆಗೆ ಬಲಿಯಾಗಿ, ಈಗಾಗಲೇ ಮದುವೆಯಾಗಿ ಮಕ್ಕಳಿರುವ ಮುದುಕನನ್ನು ತನ್ನ ಬಾಳ ಸಂಗಾತಿಯಾಗಿ ಪಡೆಯಬೇಕಾಗುತ್ತದೆ. ಮತ್ತೊಬ್ಬಳು ಗಂಡನ ಸ್ವಭಾವದಿಂದ ನೋವಿಗೊಳಗಾಗಿ ಆತನಿಂದ ವಿರಹವನ್ನು ಬಯಸಿದವಳು. ಇಲ್ಲಿ ನಾವು ಗ್ರಹಿಸಬೇಕಾದ ವಿಷಯವೆಂದರೆ, ವಿದ್ಯಾವಂತಳು, ಪ್ರಭುದ್ಧಳೂ ಆದ ಲಕ್ಷ್ಮೀಗೆ ಸ್ವಾವಲಂಬಿಯಾಗಿ ಬದುಕುವ ಶಕ್ತಿಯಿದ್ದರೂ ಕೂಡ, ಕೇವಲ ಮಗುವಿನ ಕಾರಣಕ್ಕಾಗಿ ಮಾತ್ರವಲ್ಲದೆ ಸಮಾಜದ ದೃಷ್ಟಿಕೋನದಿಂದ ಯೋಚಿಸಿ, ಅದರ ನಿಯಮಾನುಸಾರಗಳಿಗೆ ಅಂಜಿ, ಅವಳು ಒಲ್ಲದ ಮನಸ್ಸಿನಲ್ಲಿ ಗಂಡನ ಬಳಿಗೆ ಮರಳುವುದು. ಒಟ್ಟಾರೆಯಾಗಿ ಇಬ್ಬರು ಹೆಣ್ಣುಮಕ್ಕಳು ದಾಂಪತ್ಯ ಜೀವನದಲ್ಲಿ ಯಾವುದೇ ಸುಖ ಸಂತೋಷಗಳನ್ನು ಕಾಣದೆ ತಮ್ಮ ಬದುಕಿನ ನೆಮ್ಮದಿಯನ್ನೇ ಕಳೆದುಕೊಂಡಿರುವರು.

ಈ ಎರಡು ಕಥೆಗಳಿಗೆ ಸೂಕ್ತವೆಂಬಂತೆ ಹೋಲುವ ನೈಜ ಸಂಗತಿಯೊಂದನ್ನು ಇಲ್ಲಿ ವಿವರಿಸಲಾಗಿದೆ. 'ಸಾನಿಯಾ ಬಾನು' ಎಂಬ ಹುಡುಗಿ ತಾನು ಆರನೇ ತರಗತಿಯಲ್ಲಿದ್ದಾಗಲೇ ತಾಯಿಯನ್ನು ಕಳೆದುಕೊಂಡು ತಂದೆ ಮತ್ತು ಅಜ್ಜಿಯ ಆಶ್ರಯದಲ್ಲಿ ಬೆಳೆಯುತ್ತಾಳೆ. ಮನೆಯಲ್ಲಿ ಬಡತನವಿತ್ತು, ತಂದೆಯ ಆರ್ಥಿಕ ಸ್ಥಿತಿ ಅಷ್ಟೇನು ಚೆನ್ನಾಗಿರಲಿಲ್ಲ. ಹಾಗಾಗಿ 8ನೇ ತರಗತಿಗೆ ಅವಳ ವಿದ್ಯಾಭ್ಯಾಸ ಕೊನೆಯಾಗಿ, ಚೆನ್ನಾಗಿ ಓದಿ, ಒಳ್ಳೆಯ ಉದ್ಯೋಗ ಪಡೆದು, ಕುಟುಂಬವನ್ನು ನೋಡಿಕೊಳ್ಳಬೇಕು ಎಂಬ ಅವಳ ಆಸೆಗೆ ಬೀಗ ಬಿತ್ತು. ಕನಸಿನ ರೆಕ್ಕೆಗಳೊಂದಿಗೆ ಹಾರುತ್ತಿದ್ದ ಹಕ್ಕಿಗೆ ಬೇಡನೊಬ್ಬನ ಬಾಣ ನಾಟಿ ನೆಲಕ್ಕೆ ಕುಸಿದಂತಾಯಿತು. ನಂತರದಲ್ಲೇ ಅವಳ ತಂದೆ ಕುಟುಂಬಸ್ಥರ ಸಲಹೆಯ ಮೇರೆಗೆ ಅವಳಿಗೆ ಮದುವೆ ನಿಶ್ಚಯಿಸುವರು. ವಿವಾಹದ ನಂತರದ ಅವಳ ಈಗಿನ ಸ್ಥಿತಿ, ಗಂಡನ ಮನೆಯಲ್ಲಿ ದಿನನಿತ್ಯದ ಕೆಲಸಗಳನ್ನು ಮಾಡುವುದು, ಅತ್ತೆಯ ಮಾತಿಗೆ ಎಂದಿಗೂ ಎದುರಾಡದೆ ಅವರು ಹೇಳಿದ್ದನ್ನು ಚಾಚು ತಪ್ಪದೆ ಪಾಲಿಸುತ್ತಾ, ಮಕ್ಕಳ ಪಾಲನೆ ಪೋಷಣೆಯ ಜೊತೆಗೆ ಮನೆಯವರ ಸೇವೆ ಮಾಡಿಕೊಂಡು ತನಗೆ ಏನೇ ಅವಶ್ಯಕತೆಗಳಿದ್ದರೂ ಪ್ರತಿಯೊಂದಕ್ಕೂ ಗಂಡನ ಮೇಲೆ ಅವಲಂಬಿತವಾಗಿರುವುದು. ಬರೀ ಇಷ್ಟಕ್ಕೆ ಸೀಮಿತವಾಗಿ ಅವಳ ಜೀವನವು ಮುಗಿಯುವುದು.

ಹೀಗೆ ಎಷ್ಟೋ ಮಹಿಳೆಯರ ಜೀವನದಲ್ಲಿ ಇದೇ ರೀತಿಯ ಘಟನೆಗಳು ಸಂಭವಿಸುತ್ತಿರುವುದನ್ನು ನಾವು ಪ್ರತಿನಿತ್ಯ ನೋಡುತ್ತಲೇ ಇದ್ದೇವೆ. ನಮ್ಮ ರಾಷ್ಟ್ರ ಪುರುಷ ಪ್ರಧಾನವಾದ ರಾಷ್ಟ್ರವಾಗಿರುವ ಕಾರಣ ಸಮಾಜದಲ್ಲಿನ ಯಾವ ಕ್ಷೇತ್ರದಲ್ಲೂ ಕೂಡ ಸ್ತ್ರೀಯರಿಗೆ ಪೂರ್ಣ ಆದ್ಯತೆ ಈವರೆಗೂ ದೊರೆಯುತ್ತಿಲ್ಲ. ಸಮುದಾಯ ಯಾವುದೇ ಇರಲಿ, ಎಲ್ಲಾ ಜನಾಂಗಗಳಲ್ಲೂ ಮಹಿಳೆಯರೇ ಹೆಚ್ಚು ಶೋಷಣೆಗೆ ಒಳಗಾಗಿರುವರು. ಕುಟುಂಬವು ಹೆಣ್ಣಿಗೆ ಹೆರುವ ಕೆಲಸವನ್ನಷ್ಟೇ ಮೀಸಲಾಗಿರಿಸಿರುವುದು.

ಅದನ್ನು ಹೊರತು ಪಡಿಸಿ ಮಹಿಳೆಯ ಆತ್ಮಗೌರವ, ಸ್ವಾತಂತ್ರ್ಯ ಮತ್ತು ಅಸ್ತಿತ್ವವನ್ನು ಪರಿಗಣಿಸಬೇಕು. ಅವರ ಮೌನದ ಹಿಂದೆ ಅಡಗಿರುವ ಸಂಕಟ, ಹೋರಾಟಗಳು ಕೊನೆಗೊಳ್ಳಬೇಕು. ಸಾಹಿತ್ಯ, ಕಲೆ ಮತ್ತು ಮಾಧ್ಯಮಗಳಲ್ಲಿ ಮಹಿಳೆಯರ ನಿಜವಾದ ಬದುಕನ್ನು ಪ್ರತಿಬಿಂಬಿಸುವುದು ಸ್ತ್ರೀ ಸಂವೇದನೆಯ ಮುಖ್ಯ ಉದ್ದೇಶವಾಗಿದೆ. ಹಾಗೂ ಇದು ಪುರುಷ ಪ್ರಧಾನ ಮನೋಭಾವವನ್ನು ಪ್ರಶ್ನಿಸುವಂತೆ ಸಾಗಬೇಕು ಎಂಬುದೇ ನನ್ನ ಆಶಯ.

**ಪರಾಮರ್ಶನ ಗ್ರಂಥಗಳು:**

1. ಸಾರಾ ಅಬೂಬಕ್ಕರ್, (1989), ಚಪ್ಪಲಿಗಳು, ಮಂಗಳೂರು: ಚಂದ್ರಗಿರಿ ಪ್ರಕಾಶನ.
2. ವೀಣಾ ಶಾಂತೇಶ್ವರ, (1984), ತಿರುಗಿ ಹೋದಳು (ಹಸಿವು ಕಥಾ ಸಂಕಲನ), ಧಾರವಾಡ: ಮನೋಹರ ಗ್ರಂಥಮಾಲಾ.
3. ಅರ್ಚನಾ. ಆರ್, ತ್ರಿವೇಣಿ, ಮನ ಮಂಥನ.